ನವದೆಹಲಿಯಲ್ಲಿ ಖಾಸಗಿ ಹೋಟೆಲ್‌ಗಳ ವಸತಿ ವ್ಯವಸ್ಥೆ

1815 (2546) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ-ಗ್ರಾಮಿಣ):

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕರ್ನಾಟಕ ಭವನ ನವದೆಹಲಿಯಲ್ಲಿ ಕೊಠಡಿಗಳು ಸಾಕಾಗದೇ ಹಲವಾರು ಬಾರಿ ಖಾಸಗಿ ಹೋಟೆಲುಗಳಲ್ಲಿ ವಸತಿ ವ್ಯವಸ್ಥೆ ಮಾಡುವುದು ನಿಜವೇ; ಹಾಗಿದ್ದಲ್ಲಿ ಯಾವಯಾವ ಹೋಟೇಲ್‌ಗಳಿಗೆ 1998-99ರಲ್ಲಿ ಹಣ ಖರ್ಚು ಮಾಡಲಾಗಿದೆ;

(ಆ) ನವದೆಹಲಿಯಲ್ಲಿ ಖೇರ್‌ಗಾಂವ್ ರಸ್ತೆಯಲ್ಲಿ ಕಟ್ಟುತ್ತಿದ್ದ ಕಮ್ಯುನಿಟಿ ಸೆಂಟರ್ ಕಾಂಪ್ಲೆಕ್ಸ್‌ನಲ್ಲಿ ಒಂದು ಬ್ಲಾಕ್ ಕಟ್ಟಿಸಿದ್ದು ದಿನಾಂಕ 13-10-1992ರಲ್ಲಿ ಆದೇಶ ಹೊರಡಿಸಿದ್ದು, ಈ ಆದೇಶದಂತೆ ಖರೀದಿಸಲಾಗಿದೆಯೇ ಹಾಗಿದ್ದಲ್ಲಿ ಎಷ್ಟು ಮೊತ್ತ ವಿನಿಯೋಗಿಸಿದೆ ಖರೀದಿಸಿದ ಈ ಭವನ ಎಂದಿನಿಂದ ಉಪಯೋಗಿಸಲಾಗುತ್ತಿದೆ;

(ಇ) ಈ ಭವನದ ಕೆಲಸವನ್ನು ನಿಗಧಿತ ಅವಧಿಯೊಳಗೆ ವೆಚ್ಚ ಮಾಡದೇ 8.66 ಕೋಟಿ ಹಣ ಅಪ್ರಯೋಜನಕವಾಗಿದ್ದನ್ನು ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಶಿಫಾರಸ್ಸು ಮಾಡಿದ್ದು ನಿಜವೇ; ಮತ್ತು ಸದನ ಸಮಿತಿಗೆ ಗೌರವ ಕೊಡದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಜನರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

(ಅ) ಕರ್ನಾಟಕ ಭವನದಲ್ಲಿ ಕೊಠಡಿಗಳು ಸಾಕಾಗದೆ ಇರುವ ಸಮಯದಲ್ಲಿ ಸಚಿವರು ಹಾಗೂ ಹಿರಿಯ ಅಧಿಕಾರಿಗಳಿಗೆ ಐ.ಟಿ.ಸಿ ಹೋಟೇಲ್‌ಗಳಲ್ಲಿ ಕೊಠಡಿಗಳನ್ನು ಮಾಡಲಾಗಿತ್ತು. 1998-99ರಲ್ಲಿ ಹೋಟೇಲ್‌ಗಳಿಗೆ ಖರ್ಚು ಮಾಡಿದ ವಿವರ ಈ ಕೆಳಕಂಡಂತೆ ಇದೆ:-

ಹೋಟೇಲ್ ಅಶೋಕ	ರೂ.13,39,120-00
ಹೋಟೇಲ್ ಸಾಮ್ರಾಟ್	ರೂ. 2,42,155-00
ಒಟ್ಟು	ರೂ.15,81,275-00

(ಆ) ಹೌದು. 12.6 ಕೋಟಿ ರೂಪಾಯಿಗಳು ಖರ್ಚಾಗಿವೆ. ಸದನ ಭವನಕ್ಕೆ 'ಭೀಮಾ' ಎಂದು ಹೆಸರಿಡಲಾಗಿದೆ ಹಾಗೂ ಈ ಭವನವನ್ನು ದಿನಾಂಕ 7-7-1998ರಿಂದ ಉಪಯೋಗಿಸಲಾಗುತ್ತಿದೆ.

(ಇ) ಹುಡ್ಕೊ ಸಂಸ್ಥೆಯು ಕೇಂದ್ರ ಸರ್ಕಾರದ ಅಂಗ ಸಂಸ್ಥೆಯಾಗಿದ್ದು, ಅತಿಥಿ ಗೃಹದ ಕಟ್ಟಿಡವನ್ನು ರಾಜ್ಯ ಸರ್ಕಾರದ ವಶಕ್ಕೆ ನೀಡುವ ಮುನ್ನ ಅಗತ್ಯವಿರುವ ಕ್ಲಿಯರೆನ್ಸ್‌ಗಳನ್ನು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳಿಂದ ಪಡೆಯುವಲ್ಲಿ ಸ್ವಲ್ಪ ವಿಳಂಬವಾಗಿತ್ತು. ಈ ವಿಳಂಬವು ಉದ್ದೇಶಪೂರ್ವಕವಾಗಿರುವುದಿಲ್ಲ. ಸಾಕಷ್ಟು ಒತ್ತಡವನ್ನು ಹುಡ್ಕೊ ಸಂಸ್ಥೆಯ ಮೇಲೆ ಮಾಡಿ ಕಟ್ಟಡವನ್ನು ಸರ್ಕಾರದ ವಶಕ್ಕೆ ಪಡೆಯಲಾಯಿತು. ಅದುದರಿಂದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.